ಇರುವ ದೆಹಲಿ ಮೂಲದ ದಂಪತಿಯ ಪರಿಚಯವಾಯಿತು. ಚೇತನಾಳನ್ನು ಅವರ ಮನೆಗೇ ಕರೆದುಕೊಂಡು ಹೋಗಿ ಆತನ ಹೆಂಡತಿಯನ್ನು ಪರಿಚಯಿಸಿ ಕೊಟ್ಟಿದ್ದ. ''ನಾವಿಲ್ಲದಿರುವಾಗ ನೀವಿಬ್ಬರೂ ಭೇಟಿಯಾಗಬಹುದಲ್ಲ?'' ಎಂದು ತಾನಾಗಿಯೇ ಕೇಳಿದ್ದ.

ಆ ಹೆಂಗಸು ಅಷ್ಟೊಂದು ಇಷ್ಟವಾಗಿರದಿದ್ದರೂ, ಭಾಷೆಯ ಸಮಸ್ಯೆಯಿದ್ದರೂ, ಗಂಡನ ಒತ್ತಾಯಕ್ಕೆಂದು ಕೆಲ ದಿನಗಳ ನಂತರ ಒಮ್ಮೆ ಆಕೆಯ ಮನೆಗೆ ಹೋದಳು ಚೇತನಾ. ಎಷ್ಟೇ ಬೆಲ್ ಮಾಡಿದರೂ ಆ ದೆಹಲಿ ಹೆಂಗಸು ಬಾಗಿಲನ್ನೇ ತೆಗೆಯಲಿಲ್ಲ. ಆಕೆ ಮನೆಯೊಳಗೇ ಇದ್ದು ಬಾಗಿಲ ಕಿಟಕಿಯಲ್ಲಿ ತಾನು ಬಂದುದನ್ನು ನೋಡಿದ್ದಾಳೆಂಬುದು ಖಚಿತವಿತ್ತು ಚೇತನಾಳಿಗೆ. ಈ ಘಟನೆಯ ನಂತರ ಚಂದ್ರಕಾಂತ 'ಇನ್ನೊಮ್ಮೆ ಹೋಗಿ ನೋಡು' ಎಂದು ಎಷ್ಟೇ ಹೇಳಿದರೂ ಚೇತನಾ ಆ ಮನೆಗೆ ಹೋಗಲು ಒಪ್ಪಲಿಲ್ಲ.

★★★

ಹಿಂದಿನ ಎರಡು ದಿನಗಳಿಂದ ಚಂದ್ರಕಾಂತ ಒತ್ತಡದಲ್ಲಿದ್ದ. ಕಂಪನಿಯಲ್ಲಿ ಆಡಿಟ್ ನಡೆಯುತ್ತಿತ್ತು. ಮನೆಗೆ ಬರಲು ತುಂಬಾ ತಡವಾಗುತ್ತಿತ್ತು. ಅಂದು ಮುಂಜಾನೆ ತಿಂಡಿ ತಿನ್ನುವಾಗ, ''ದೋಸೆ ಮಾಡುತ್ತೇನೆಂದಿದ್ದೆಯಲ್ಲವೇ, ಉಪ್ಪಿಟ್ಟು ಯಾಕೆ ಮಾಡಿದೆ?'' ಎಂದು ಸಹಜವಾಗಿಯೇ ಕೇಳಿದ.

''ಉದ್ದಿನ ಬೇಳೆ ಖಾಲಿಯಾಗಿದೆ'' ಎಂದು ಚೇತನಾ ಉತ್ತರಿಸಿದ್ದೇ ತಡ, ನಖಶಿಖಾಂತ ಉರಿದುಹೋದ.

''ಖಾಲಿಯಾದರೆ, ತರಲಾಗುವುದಿಲ್ಲವೇನು? ಅದಕ್ಕೂ ನಾನೇ ಬರಬೇಕೆ? ಎಷ್ಟು ಬಾರಿ ಹೇಳಿದ್ದೇನೆ, ಒಬ್ಬಳೇ ಹೋಗು, ಮ್ಯಾನೇಜ್ ಮಾಡುವುದನ್ನು ಕಲಿ ಅಂತಾ... ಈಗಲೂ ಮಾಡಲಿಲ್ಲವೆಂದರೆ ಮತ್ಯಾವಾಗ ಕಲಿಯುತ್ತೀಯಾ?... ನಾಳೆ ನಾನು ಗೊಟಕ್ ಅಂದ್ರೆ ಏನು ಮಾಡ್ತೀಯಾ?... ಹೇಗೆ ನಿಭಾಯಿಸ್ತೀಯಾ?...'' ಎನ್ನುತ್ತ ಚೀರಾಡಿದ.

ಹಿಂದೆಂದೂ ಕಾಣದ ಚಂದ್ರಕಾಂತನ ಈ ಅವತಾರವನ್ನು ನೋಡಿ ಆಕೆ ಹೆದರಿ, ನಡುಗುವ ದನಿಯಲ್ಲಿಯೇ, ''ಒಬ್ಬಳೇ ಹೋಗಬೇಕು ಅಂತಾ ಅಲ್ಲ. ಹೊರಗೆ ತುಂಬಾ ಬಿಸಿಲಿತ್ತು...'' ಎಂದು ಸಮಜಾಯಿಷಿ ಕೊಡುತ್ತಿರುವ ನಡುವೆಯೇ,

''ಬಿಸಿಲಾದರೇನಾಯ್ತು?... ಇನ್ನು ಹತ್ತು ವರ್ಷಕ್ಕೆ ಬೆಂಗಳೂರಿಗೂ ಇದೇ ಗತಿ ಬರುತ್ತೆ. ಅಲ್ಲಿಯೂ ಇಡೀ ದಿನ ಏಸಿಯ ಒಳಗೇ ಕುಳಿತಿರುತ್ತೀಯೇನು?... ಬಿಸಿಲನ್ನೂ ರೂಢಿಮಾಡಿಕೊಳ್ಳಬೇಕು ತಾನೇ?... ನಾವೇನು ಯುರೋಪಿಯನ್ನರಾ ಅಥವಾ ರಾಜವಂಶಸ್ಥರಾ...'' ಎಂದೆಲ್ಲಾ ಯದ್ವಾ ತದ್ವಾ ಬೈಯ್ಯತೊಡಗಿದ. ''ನನಗೆ ಬೇಡ ನೀನೇ ತಿನ್ನು'' ಎಂದು ಕಟುವಾಗಿ ಹೇಳಿ, ಪ್ಲೇಟಿನಲ್ಲಿರುವುದನ್ನು ಅರ್ಧಕ್ಕೇ ಬಿಟ್ಟು ಹಾಗೇ ಆಫೀಸಿಗೆ ಹೊರಟುಹೋದ.

ಆತ 'ನನಗೆ ಬೇಡ ನೀನೇ ತಿನ್ನು' ಎಂದು ಹೇಳಿದ್ದು ಹುಂಡಿ ಕಾಲ್‌ನಲ್ಲಿಯ 'ಜಲ್ದೀ ಖತಮ್ ಕರೋ' ಎಂದ ಅಪರಿಚಿತ ದನಿಯಂತೆಯೇ ಕೇಳಿಸಿತು ಚೇತನಾಳಿಗೆ. ತನ್ನರಿವನ್ನೂ ಮೀರಿ ಆದ ಈ ಹೋಲಿಕೆಗೆ ತತ್ತರಿಸಿಹೋದಳು. ದಿನವಿಡೀ ಏನೂ ರುಚಿಸಲಿಲ್ಲ ಆಕೆಗೆ.

ಸಂಜೆ ಬಂದಮೇಲೂ ಚಂದ್ರಕಾಂತನ ಕೋಪ ಕಡಿಮೆಯಾಗಿರಲಿಲ್ಲ. ತಡರಾತ್ರಿ ಬಂದವನು, ಊಟಮಾಡದೇ ಏನೂ ಮಾತನಾಡದೇ ಹಾಗೇ ಹಾಸಿಗೆಗೆ ಹೋದ. ಆದಿನ ರಾತ್ರಿ ಚೇತನಾಳಿಗೆ ವಿಚಿತ್ರ ಕನಸು – ಯಾರಿಗೋ ಫೋನ್ ಮಾಡುತ್ತಿದ್ದಾಳೆ, ಎಷ್ಟೇ ನಂಬರುಗಳನ್ನು ಒತ್ತಿ ಒತ್ತಿ